Reg'd No. M. 1299 SATYAVADI Founded 1917

ಸತ್ಯವಾದಿ

(ಅರಮನೆ ಸಿಂಸ್ತೇದಾರ್ ಎಂ. ಏ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟಿದ್ದು)

ಸಂಪುಟ 30 ಸಂಚಿಕೆ 107] ಶನಿವಾರ 28—12—46 [ಬಿಡಿ ಪ್ರತಿ 3 ಪೈ

ಶಾಂತಿಃ ಶಾಂತಿಃ ಶಾಂತಿಃ

.....

1942 ನೆಯ ಇಸ್ವಿಯಲ್ಲಿ ಎ. ಐ ಸಿ ಸಿ ವಿಾಟಿಂಗು ಬೊಂಬಾಯಿಯಲ್ಲಿ ನ ಡೆದಾಗ ಅದರ ನಿರ್ಣಯ ಹೊರಗ ಬರು ವ ಮೊದಲೇ ಕಾರ್ಯಕ್ರಮ ಸಿದ್ಧವಾ ಗುವುದಕ್ಕಿಂತ ಮುಂಚಿತವಾಗಿಯೇ ಸ ದಸ್ಯರನ್ನೆಲ್ಲಾ ಬಂಧಿಸಿದರು. ಕಾಂ ಗ್ರೆಸ್ ಸಂಸ್ಥೆಯು 'ನ್ಯಾಯಬಾಹಿರ' ವೆಂದು ಸಾರಲಾಯಿತು. ಕಾಂಗ್ರೆಸ್ಸು ನವನೆಂದು ಗುಮಾನಿ ಇದ್ದವರನ್ನೆಲ್ಲಾ ದಸ್ತಗಿರಿ ಮಾಡಿ ಶಿಕ್ಷಿಸಲಾಯಿತು. ಆಗ ಇದ್ದ ಚಟುವಟಿಕೆಗಳೆಲ್ಲಾ ಬ್ರಿಟಿಷ್ ಸರ ಕಾರಕ್ಕೆ ಈಗ ಇಲ್ಲದಿರುವ ಕಾರಣವೇನ? ಬ್ರಿಟಿಷರೆ ಉತ್ತೇಜನದಿಂದಲೇ ಈಗಿನ ಅತ್ಯಾಚಾರ ದಂಗೆ, ಲೂಟಿ, ದರೋಡೆಗ ಳು ಆಗುತ್ತಿವೆ. ಅದೇ ಕಕರಣ.

ಬ್ರಿಟಿಷ್ ಅಮಾತ್ಯತ್ಯರು ಹೇಳಿಕೆ ಯಂತೆ ರಾಜ್ಯಾಂಗ ರಚನೆಯನ್ನು ಒ ಪ್ಪಿದವರು ಮಾತ್ರ ಕೇಂದ್ರ ಸರಕಾರದ ಲ್ಲಿರಬಹುದು. ಒಂದು ಕಾಲದಲ್ಲಿ ತಾ ತ್ಕಾಲಿಕ ಸರಕಾರ ರಚನೆಯನ್ನು ಕೈ ಕೊಂಡಾಗ ಅದರಲ್ಲಿ ಲೀಗು ಸೇರಿರಲಿ ಲ್ಲ. ವೈಸರಾಯರೇ ಲೀಗಿನವರನ್ನು ಸರಕಾರದಲ್ಲಿ ಸೇರಿಸಿದ್ದು ಹೀಗೆ ಲೀಗು ಸರಕಾರಕ್ಕೆ ಸೇರುವಾಗ ವೈಸರಾಯರು ಲೀಗಿಗೆ ಯಾವ ಸ್ಪೆಶಲ್ ಭರವಸೆಯ ನ್ನು ಕೊಟ್ಟಿಲ್ಲ. ವೈಸರಾಯರು ಹೇಳಿ ದರು ಲೀಗು ಸೇರಿತು ಅಷ್ಟೆ.

ಒಮ್ಮೆ ಬೇಡವೆಂದು ಹೇಳಿ ದೂರ ಸರಿದ ಲೀಗಿನವರನ್ನು ಮತ್ತೆ ಪುನಃ ಕರೆ ದು ಸರಕಾರದಲ್ಲಿ ಕುಳ್ಳಿರಿಸಿರುವರಗ ಟ್ಟು ಇಷ್ಟೆ ತಾತ್ಕಾಲಿಕ ಸರಕಾರದ ದಿನಚರಿ ಕಾರ್ಯಗಳಲ್ಲಿಯೂ ತಡೆ ತಂ ದು ಹಾಕುವುದೇ ಆಗಿದೆ. ಈಗ ಲೀ ಗು ರಾಜ್ಯಾಂಗ ರಚನಾ ಸಭೆಗೆ ಬರುವು ದಿಲ್ಲವೆಂದು ಹೇಳುತ್ತಿದೆ ಆ ಸಭೆಯ ಲ್ಲಿ ನಹರೂ ತಂದ ಉದ್ದೇಶ ಸ್ಪಷ್ಟೀಕರ ಣದ ನಿರ್ಣಯವನ್ನು ಪಾಸಾದ ಬಳಿಕ ವೈ ಸರಾಯರೇ ಲೀಗಿನವರನ್ನು ಸಭೆಗೆ ಸೇ ರುವಂತೆ ವಿನಂತಿಸುತ್ತಾರೆ.

ಬ್ರಿಟೀಷರು ಇಂಡಿಯಾದಲ್ಲಿ ತಮ್ಮ ಸ್ಥಾನ ಭದ್ರತೆಗಾಗಿ ಲೀಗನ್ನು ಅಷ್ಟು ಪ್ರೇಮದಿಂದ ಸೋಡುತ್ತಾರೆ ಎಂಬು ದು ಸರ್ವವಿದಿತವು.

ಕಲ್ಕತ್ತೆ ನೌಖಾಲಿ ಅಹಮ್ಮದಾಬಾ ದು ಮೀರತ್ತು ಬೊಂಬಾಯಿ ಬಿಹಾರ್ ಇತ್ಯಾದಿ ಅನೇಕ ಕಡೆಗಳಲ್ಲಿ ದಂಗೆ ಲೂ ಸ್ತ್ರೀ ಅಪಹಾರ ಮತ್ತಾಂತರ ಕೊಳ್ಳೆ ಇತ್ಯಾದಿ ಅಕಶಾಯಿಗಳ ಕೆಲಸಗಳು ನ ಡೆದವು. ಸಾವಿರಗಟ್ಟಲೆ ಜನಗಳು ಸ ತ್ತರು. ಗಾಯಗೊಂಡರು. ನಷ್ಟ ಪಟ್ಟರು. ಮಾನಹಾನಿಗೀಡಾದರು. ಇದೆಲ್ಲಾ ಆಗದ ಹಾಗೆ ಈ ವರಿಗೆ ನಡೆ ದ ಬಂದೋಬಸ್ತು ಏನು?

ಈ ಕೋಮುವಾರು ಗಲಾಟೆಗಳು ಅಲ್ಲಲ್ಲೇ ಮುಗಿಯಲಿಲ್ಲ ಒಂದೆಡೆಯಿಂ ದ ಇನ್ನೊಂದೆಡೆಗೆ ಹಂಡಿವೆ ಈ ವಿ ಷ ಭೀಜವು ನಮ್ಮ ಸಂಸ್ಥಾನದಲ್ಲೂ ಹಿಂದೆ ಒಂದೆರಡು ಕಡೆಗಳಲ್ಲಿ ಕೊಂಚ ಕೊಂಚ ಬಿಸಿ ತಂದಿದೆ. ಹೊಗೆಯಾಡಿ ದೆ. ಇಲ್ಲಿಯ ಸರ್ಕಾರವಾದರೋ ಅ ದನ್ನು ತಡೆಯಲು ಕೈಗೊಂಡ ಕಾರ್ಯ ಕ್ರಮ? ಶಾಂತಿ ಸಮಿತಿಗಳ ಸ್ಥಾಪನೆ. ಶಾಂತಿಮಂತ್ರದ ಜಪ, ಪುರಶ್ಚರಣಗಳು.

ಯಾವುದೋ ಕೋಮಿನ ಜನರು ಸೊಕ್ಕಿನಿಂದ ಧೂರ್ತರಾಗಿ, ಹುಲಿ ಕರ ಡಿಗಿಂತೆ ಕುಡವರ ಮೇಲೆ ಬಿದ್ದ ಹಾ ನಿಷ್ಠ ಸ್ಯ ಮಾಡಿದರೆ ಅದನ್ನು ತಡ್ಯ ಲು ಶಾಂತಿ ಸಮಿತಿಯೇ? ಹಿಟ್ಲ ರ್ ಬ್ರಿಟಿಷರ ಮೇಲೆ ಯುದ್ಧ ಹೂಡಿದಾಗ ಇಂಗ್ಲೆಂಡಿನಲ್ಲಿ ಶಾಂತಿ ಸಮಿತಿ ರಚನೆ ಆಾಗಿತ್ತೇ?

ನಮ್ಮ ಸಂಸ್ಥಾನದಲ್ಲಿ ಈಗ ಎಲ್ಲೆಲ್ಲಿ ನೋಡಿದರೂ ಶಾಂತಿ ಸಮಿತಿ ಮತ್ತು ಸೆಕ್ಷೆ ಜಾರಿ ಹೀಗೆ ಎರಡು ಕಾರ್ಯಕ್ರಮಗಳು ನಡೆಯುವುದು ಕಂಡು ಬರುತ್ತಿದೆ. ಜನಗಳ ರಕ್ಷಣೆಗೆ ಇದಕ್ಕಿಂತ ಬೇರೆ ಉಪಾಯಗಳೇ ಇಲ್ಲವೇ? ದೊಂ ಬಿ ಗಲಾಟೆಗಳನ್ನು ಮಾಡಲು ಉದ್ದೇಶ ಪಟ್ಟವರು ಯಾರು? ಅಂಥವರನ್ನು ಹದ್ದು ಬಸ್ತಿಗೆ ತರುವುದಕ್ಕಾಗುವು ದಿಲ್ಲವೇ?

Edited, Printed and Published by M. S Krishna Rao at the Satyavadi Press ChamarajAgrahar, Mysore.

ಉಪಾಧ್ಯಕ್ಷ ಚುನಾವಣೆ

ಮೈಸೂರು ಪೌಂಸಭೆಯ ಉಪಾಧ್ಯ ಕ್ಷ ಚುನಾವಣೆಗೆ ಮುಂದಿನ ತಿಂಗಳು ತಾ || 9 ರ ಸಂಜೆ 5 ಗಂಟೆಗೆ ಅರ್ಜಿಯ ನ್ನು ತೆಗೆದುಕೊಳ್ಳಲಾಗುವುದು. ಈ ಬಗ್ಗೆ ಮುಂದಿನ ಮಾಹೆ ತಾ || 2 ರಲ್ಲಿ ವಿಶೇಷ ಸಭೆ ನೋಟಿಸನ್ನು ಕೊಡಲಾಗು ವುದು ಮುಂದಿನ ತಿಂಗಳು ತಾ || 10 ರ 5 ಗಂಟೆಗೆ ಪೌಂಸಭೆಯ ಕಛೇರಿಯಲ್ಲಿ ಉಮೇದುವಾರರ ಹೆಸರುಗಳನ್ನು ಪ್ರಸಿ ದ್ಧಪಡಿಸಲಾಗುವುದು 20 ನೇ ತಾರೀಖು ವಿಶೇಷ ಸಭೆ ಸೇರುವುದು.

ಇಂದಿನ ವರ್ತಮಾನ

ಕೇಂದ್ರ ತಾತ್ಕಾಲಿಕ ಸರ್ಕಾರದ ಮಜೂರ ಮಂತ್ರಿ ಶ್ರೀ ಜಗಜೀವನ ರಾಂ ರವರು ಮಧುರಾದಲ್ಲಿ ಮಾಡಿದ ಭಾಷ ಣವನ್ನು ಕಳೆದೂ ತೆಳಿಸಿದರು.

ಂ ಂ

ಚನ್ನಪಟ್ಟಣದ ಗಲಭೆ ಸಂಬಂಧದಲ್ಲಿ 42 ದಸ್ತಗಿರಿಗಳಾಗಿವೆ.

ಂ ಂ

ಶ್ವೇತವರ್ಣದವರು ಇತರ ವರ್ಣಗ ಳೊಡನೆ ಸಮಾನತೆಯನ್ನು ತೋರಿಸದಿ ದ್ದರೆ ಆಫ್ರಿಕಾ ಮತ್ತು ಏಷ್ಯಗಳನ್ನು ತ್ಯಜಿಸಬೇಕಾಗುವುದು ಎಂದು ಶ್ರೀ ಕೃ ಷ್ಣಲಾಸ್ಮಟ್ಸರ ಹೇಳಿಕೆಗೆ ಜ್ವಲಂತೋ ತ್ಕಂವಿತ್ಕಿಧಾರೆ

ಂ ಂ

ಫ್ರಾಂಕೋ ಸ್ಪೇನ್ ಗಡಿಲಾ ಯು ದ್ಧದ ಭೀತಿಯಲ್ಲಿ ಬಿದ್ದಿದೆ.

ಂ ಂ

ಸಾರ್ವಭೌಮತ್ವವನ್ನು ಬಿಟ್ಟು ಮು ತ್ತಾವ ವಿಷಯಕ್ಕೂ ಭಾರತ ರಾಜಕೀ ಯ ಶಾಖೆ ಸಮನೇಶಿಸಕೂಡದೆಂದು ಅಖಿ ಲ ಭಾರತ ಸಂಸ್ಥಾನಿ ಸಮ್ಮೇಳನ ನಿರ್ಣ ಯಿಸಿದೆ.

ಮೌ || ಅಜಾದರು ಮಂತ್ರಿಗಳಾದರು

ನವದೆಹಲಿ ಡಿ 27 — ಆಸಫಾಲಿಯು ಅಮೇರಿಕಾದಲ್ಲಿ ಭಾರತ ರಾಯಭಾರಿ ಯಾಗಿ ನಿಯಮಿಸಲ್ಪಟ್ಟಿದ್ದರಿಂದ ಹಾ ಲಿಯಾದ ಮಂತ್ರಿಮಂಡಲ ಸ್ಥಾನಕ್ಕೆ ರಾಜರು ಮೌಲಾದ ಅಬ್ದುಲ್ ಕಲಾಂ ಅಜಾದರನ್ನು ನೇಮಿಸಿರುವರು.

ಭಾರಿ ಎಣ್ಣೆ ಪೈಪು ಲೈನು

ಲಂಡನ್ ಡಿ 26 — ಆಂಗ್ಲೊ ಇ ರಾನಿಯನ್ ಎಣ್ಣೆ ಕಂಪೆನಿ ಮತ್ತು ಅ ಮೇರಿಕಾ ಸ್ಟಾಂಡರ್ಡ್ ಆಯಿಲ್ ಕಂ ಪೆನಿಯವರು ಪರ್ಷಿಯಾ ಭೂಶಿರದಿಂದ ಮೆಡಟೆರೋನಿಯನ್ನಿಗೆ ಎಣ್ಣೆ ಪೈಪು ಲೈನು ಹಾಕುವ ವಿಷಯ ಪರಿಶೀಲಿಸುತ್ತಿ ರುವರು. ಇದಕ್ಕೆ 30000000 ಪೌಂ ಡು ವ್ಯಯವಾಗುವುದೆಂದು ಹೇಳಲಾ ಗಿದೆ.

ಗಾಂಧೀಜಿಗೆ ರಕ್ಷಣೆ

ಕಲ್ಕತ್ತಾ ಡಿ 27 — ಮುಖ್ಯ ಮಂ ತ್ರಿ ಸುಹ್ರವರ್ದಿಯವರು ಗಾಂಧೀಜಿ ಕಾಲು ನಡಿಗೆ ಪ್ರವಾಸ ಪ್ರಾರಂಭಿಸಿ ದಾಗ ಅವಶ್ಯಕವಾದ ರಕ್ಷಣೆಯನ್ನು ಏರ್ಪಡಿಸುವುದಾಗಿ ಹೇಳಿರುವರು

ಸೈನ್ಯದಿಂದ ನಿವೃತ್ತರಾದವರಿಗೆ ೨೫೦೦೦ ಎಕರೆ ಜಮೀನು

ಹೈದರಾಬಾದು ಡಿ 27 — ತಾ ತ್ಕಾಲಿಕ ಸರ್ಕಾರದ ಮಜೂರ ಮಂತ್ರಿ ಶ್ರೀ ಜಗಜೀವನ ರಾಂ ರವರು ಮಧುರಾದಲ್ಲಿ ಮಾಡಿದ ಭಾಷ ಣವನ್ನು ಕಳೆದೂ ತೆಳಿಸಿದರು.

ಂ ಂ

ಚನ್ನಪಟ್ಟಣದ ಗಲಭೆ ಸಂಬಂಧದಲ್ಲಿ 42 ದಸ್ತಗಿರಿಗಳಾಗಿವೆ.

ಂ ಂ

ಶ್ವೇತವರ್ಣದವರು ಇತರ ವರ್ಣಗ ಳೊಡನೆ ಸಮಾನತೆಯನ್ನು ತೋರಿಸದಿ ದ್ದರೆ ಆಫ್ರಿಕಾ ಮತ್ತು ಏಷ್ಯಗಳನ್ನು ತ್ಯಜಿಸಬೇಕಾಗುವುದು ಎಂದು ಶ್ರೀ ಕೃ ಷ್ಣಲಾಸ್ಮಟ್ಸರ ಹೇಳಿಕೆಗೆ ಜ್ವಲಂತೋ ತ್ಕಂವಿತ್ಕಿಧಾರೆ

ಂ ಂ

ಫ್ರಾಂಕೋ ಸ್ಪೇನ್ ಗಡಿಲಾ ಯು ದ್ಧದ ಭೀತಿಯಲ್ಲಿ ಬಿದ್ದಿದೆ.

ಂ ಂ

ಸಾರ್ವಭೌಮತ್ವವನ್ನು ಬಿಟ್ಟು ಮು ತ್ತಾವ ವಿಷಯಕ್ಕೂ ಭಾರತ ರಾಜಕೀ ಯ ಶಾಖೆ ಸಮನೇಶಿಸಕೂಡದೆಂದು ಅಖಿ ಲ ಭಾರತ ಸಂಸ್ಥಾನಿ ಸಮ್ಮೇಳನ ನಿರ್ಣ ಯಿಸಿದೆ.

ಸೈನ್ಸ್ ಕಾಂಗ್ರೆಸ್

ಡೆಲ್ಲಿಯಲ್ಲಿ ಜನವರಿ ಪ್ರಥಮ ವಾಾ ದಲ್ಲಿ ಈ ಸಾರಿ ಸೈನ್ಸ್ ಕಾಂಗ್ರೆಸ್ಸು ರಾ ಷ್ಟ್ರೀಯ ಸರಕಾರದ ನೇತೃತ್ವದಲ್ಲಿ ಪಂ ಡಿತ ನೆಹರುರವರ ಅಧ್ಯಕ್ಷತೆಯಲ್ಲಿ ನಡೆ ಯುವುದು.

ಮುಂದಿನಸಾರಿ ಗೌರ್ನರುಗಳು ಜೈಲಿಗೆ ಹಾಕಲ್ಪಡುವರು

ಜಯಪ್ರಕಾಶನಾರಾಯಣರ ಯೋ ಜನೆಯಂತ ಮುಂದಿನ ಕಾಂಗ್ರೆಸ್ ಚಳ ವಳ ಪ್ರಾರಂಭಿಸಿದರೆ ಗೌರ್ನರುಗಳೆಲಾ ಜೈಲಿನಲ್ಲಿ ಬಂಧಿಸಲ್ಪಡುವರಂತೆ!

ಭಾರಿ ಡಕಾಯಿತಿ

ಬರೂಸೆಲಂ ಡಿ 26 — 3 ಮಂದಿ ಸಶಸ್ತ್ರ ಯಹೂದ್ಯರು ಷೆಮಿರ್ ವಜ್ರದ ಕಾರ್ಖಾನೆ ಗುಮಾಸ್ತರನ್ನು ಬೆದರಿಸಿ 6 ಸಾವಿರ ಪೌಂಡು ಬೆಲೆಯ ವಜ್ರಗಳ ನ್ನೆ ಡನೆಗೂ 700 ಪೌಂಡು ನಗದು ಮತ್ತು ಸರ್ಕಾರಿ ಬಾಂಡುಮೊದಲಾದವನ್ನು ದೋ ಚಿಕೊಂಡು ಪರಾರಿಯಾದರು.

ರಾಜ ಭೇಟಿ ವೈಭವ — ಫೆಬ್ರವರಿ ೭ ॥ 17 ರಿಂದ ಏಪ್ರಿಲ್ 24 ರ ವರೆಗೆ ದಕ್ಷಿಣ ಆಫ್ರಿಕಾ ಪ್ರವಾಸ ಮಾಡುವರು. ನಾಲ್ಕು ಸಾವಿರ ನೈಲು ಸಂಚರಿಸುವ ವಿಶೇಷ ರೈಲಿನಲ್ಲಿ 180 ಡ್ರೈವರುಗಳು ಮತ್ತು 87 ಮಂದಿ ಗಾರ್ಡುಗಳು ಇರುವರು. ಕೇಪ್‌ಟೌನಿನ ಹತ್ತಿರವಿರುವ ಟೇಬಲ್ ಪರ್ವತವನ್ನು ರಾಜರು ಬುಧವಾರಕ್ಕೆ 20 ಕೋಟಿ ಕ್ಯಾಲರಿಷ್ಟಾದ ದೀಪದಿಂದ ಬೆಳಗಲಾಗುವುದು.

ಬೇಗನೆ ಚುನಾವಣೆ ನಡೆಯಬೇಕು — ಅಖಿಲ ಭಾರತ ಪ್ರಜಾ ಸಮ್ಮೇಳನದ ಕಾರ್ಯಕಾರಿ ಸಭೆ ಶ್ರೀ ಪಟ್ಟಾಭಿಯವರ ಅಧ್ಯಕ್ಷತೆಯಲ್ಲಿ ನೇತ ರಾಜ್ಯಾಂಗ ಸಭೆಗೆ ಸಂಸ್ಥಾನಗಳಿಂದ ಬೇಗನೆ ಪ್ರಜಾಪ್ರತಿನಿಧಿಗಳು ಬರಬೇಕೆಂದು ತೀರ್ಮಾನಿಸಿದ್ದಲ್ಲದೆ ಹೈದ್ರಾಬಾದನ್ನು ಖಂಡಿಸಿತು.

ವಿಶ್ವಭಾರತಿಗೆ ಸಹಾಯ — ವಿಶ್ವಭಾರತಿಯಲ್ಲಿ ವಿನಯಭವನ ಸ್ಥಾಪಿಸಲಾಗುವುದು. ಅದು ಉಪಾಧ್ಯಾಯ ಶಿಕ್ಷಣ ಸಂಸ್ಥೆ. ಕೇಂದ್ರ ಸರ್ಕಾರ 4 ಲಕ್ಷ 95 ಸಾವಿರ ರೂ. ದಾನ ಮತ್ತು ವರ್ಷಕ್ಕೆ 75 ಸಾವಿರ ರೂ. ಗ್ರಾಂಟು ಕೊಡುವುದು. ವಿಶ್ವಭಾರತಿಗೆ 6 ಲಕ್ಷ 75 ಸಾವಿರ ರೂ. ಕೊಡಲಾಗುವುದು ಎಂದು ರಾಜಾಜಿ ಶಾಂತಿನಿಕೇತನದಲ್ಲಿ ಅಂಭೋತ್ಸವಕಾಲದಲ್ಲಿ ಹೇಳಿದರು.

ಆಯುರ್ವೇದ ಸಮ್ಮೇಳನ

15 ನೆಯ ಅಖಿಲ ಕರ್ನಾಟಕ ಆಯುರ್ವೇದ ಸಮ್ಮೇಳನವು 1947 ನೇ ಜನವರಿ ತಿಂಗಳು 8 ನ್ನು 9 ದಿನಗಳಲ್ಲಿ ಗದಗಿನಲ್ಲಿ ನಡೆಯುವುದು. ಸಮ್ಮೇಳನಾಧ್ಯಕ್ಷ: ಬೊಂಬಾಯಿ ಆರೋಗ್ಯ ಮಂತ್ರಿ ಡಾಕ್ಟರ್ ಗಿಲ್ಡರ್. ಮತ್ತು ಸಮ್ಮೇಳನ ಪ್ರದರ್ಶನಾಧ್ಯಕ್ಷ: ಮಧ್ಯಾಹ್ನ ಆರೋಗ್ಯಮಂತ್ರಿ ಶ್ರೀಮತಿ ಲಕ್ಷ್ಮೀಪತಿಯವರು. ವೈದ್ಯಕೀಯ ವಿಭಾಗಕ್ಕೆ ಬೊಂಬಾಯಿ ದೇಶೀಯ ಬೋರ್ಡಿನ ಅಧ್ಯಕ್ಷ ಡಾ ॥ ಬಿ. ಸಿ. ಅಳಗು ಎಂ. ಎಲ್. ಎ. ರವರು ಪ್ರಾರಂಭ ಭಾಷಣ ಮಾಡುವರು. ಆಯುರ್ವೇದ ವಸ್ತುಗಳ ಪ್ರದರ್ಶನವನ್ನೂ ಏರ್ಪಡಿಸಿದೆ. ಸಮ್ಮೇಳನಕಾಲದಲ್ಲಿ ಪಾವರಸವನ್ನು ಅಗ್ನಿ ಸ್ಥಾಯಿಯನ್ನಾಗಿ ಮಾಡಿ ತೋರಿಸುವವರಿಗೆ ಅರವತ್ತು ರೂಪಾಯಿಗಳ ಬಹುಮಾನವನ್ನು ಕೊಡುವುದಾಗಿಯೂ ನಿರ್ಣಯಿಸಿದೆ.

ಮೈಸೂರು ಸಿಟಿ ರೇಷನಿಂಗ್

No. R 1 -- 188 / 1946-47
R 6 - 81 / 46-47

ಮೈಸೂರು ಸಿಟಿಯಲ್ಲಿರುವ ಎಲ್ಲಾ ಸರ್ಕಾರಿ ಡಿಪೋ, ಮೊಹಲ್ಲಾ ಸೆಬ್‌ಗೋಡೌನ್, ನರ್ಕರ ಡಿಪೋ, ಮತ್ತು ಸಹಕಾರ ಸಂಘಗಳೂ ಸಹಾ ಈ ಕೆಳಗಂಡ ತಾರೀಖುಗಳಲ್ಲಿ ನವೂದಿಸಿರುವ ಕಾರಣಗಳ ಪ್ರಯುಕ್ತ ಡಿಪೋಗಳು ಮುಚ್ಚಲ್ಪಡುವೆ.

31-12-46 ಮಂಗಳವಾರ	ದಿನಪಿಣಿಕೆಗಾಗಿ
1-1-47 ಬುಧವಾರ	ನೂತನ ವರ್ಷಾರಂಭ ದಿವಸಕ್ಕಾಗಿ

(ಸಹಿ) ಅಬ್ದುಲ್ ರಜಾಕ್
ರೇಷನಿಂಗ್ ಆಫೀಸರ್
ಮೈಸೂರು ಸಿಟಿ

At Opera — 2nd Houseful Week

ಸೂರಿಬಾಬು, ರಾಜ್ಯಂ, ಸೌದಾಮಿನಿ, ಲಿಂಗಮೂರ್ತಿ, ಉಮಾಮಹೇಶ್ವರರಾವ್ ನಾತ್ಯವಹಿಸಿರುವ

ನಾರದ - ನಾರದಿ

[ತೆಲಗು]

At Ranjit — 2nd Glorious Week

ನೂರ್‌ಜಹಾನ್ — ಸುರೇಂದ್ರ — ಜಹರ್ ರಾಜಾ — ಸುರಿಯ

ನಾತ್ಯವಹಿಸಿರುವ

ಅನೋಲ್ ಘಡಿ

Mysore City Municipality

— NOTIFICATION —

No. M. 6 Fl. 5 / 46-

Notice is hereby given that sealed tenders will be received up to 3 p. m. on 13-1-1947 at the Office of the President, City Municipal Council, Mysore, for the right of stocking and distributing about 10000 bags of charcoal per mensem in Mysore City for a period of one year from 1-2-1947.

2. The tender should be accompanied by a deposit of Rs. 3000 (Rs. Three thousand only) which should be credited to Municipal Funds and the certified challan enclosed with the tender.

3. No tender embodying, modified or fresh conditions will be considered.

Other details of the contract may be ascertained in the Municipal Office during office hours on working days.

R. Ramachandra Rao Bahadur,
President.

ಉಡುಪುಗಳನ್ನು ಅತಿ ಚೊಕ್ಕವಾಗಿ ತೊಳೆದು
— ಶುಭ್ರಮಾಡುವ ಸಾಧಕ —

ಮೈಸೂರು ಸಾಬೂನನ್ನು ಉಪಯೋಗಿಸಿದ ಹೊರತು, ಆಶ್ಚರ್ಯಕರವಾದಷ್ಟು ನುಟ್ಟಿಗೆ ಅದರಲ್ಲಿ ಅಡಗಿರುವ ನಿರ್ಮಲೀಕರಣಶಕ್ತಿಯನ್ನು ತಿಳಿಯಲಾರಿ;
ಈ ಸಾಬೂನನ್ನು ಇವತ್ತು ಉಪಯೋಗಿಸಿ ನೋಡಿ;
ಅದರ ಪ್ರತಿಫಲವನ್ನು ಕಂಡು ನೀವೇ ಬೆರಗಾಗುವಿರಿ.

ಮೈ ಸೂ ರು
ಸಾ ಬೂ ನು

ಕೊಳಕು ಬಟ್ಟೆಗಳನ್ನು
ಶುಭ್ರಗೊಳಿಸುವುದು

ಶ್ರೀ ಲಕ್ಷ ಚಂಡೀ ಮಹಾಯಜ್ಞ ಮತ್ತು ಅ. ಭಾ. ಧರ್ಮ ಸಂಘ

ಮಹಾಧಿವೇಶನದ ವಿಶೇಷ ಸಂಚಿಕೆ

ಶಾ ॥ 14-4-47 ॥ ಶ್ರೀ ॥ ಸಂ 31

"ಪ್ರಬೋಧ"

ಮೈಸೂರು ದೇಶೀಯ ವರ್ಣಾಶ್ರಮ ಸ್ವರಾಜ್ಯ ಸಂಘದ
ಪ್ರಬೋಧದ ಸಪ್ತಾಹಿಕ ಪ್ರಕಟನಮಾಲೆ

ಸಂಪಾದಕ– ಗುಂಡ್ಕಿ ಮಹಾಬಲಭಟ್ಟ, ವೇದಾಂತಶಿರೋಮಣಿ ವೇದಾಂತವಿಶಾರದ
ಸಂಘದ ಕಾರ್ಯದರ್ಶಿ, ದೂರ್ವಾಸಪುರಂ, ಶಿವಮೊಗ್ಗಾ ಜಿಲ್ಲಾ

॥ ಶ್ರೀ ಗಣೇಶ ಶಾರದಾ ಗುರುಭ್ಯೋನಮಃ ॥

ಶ್ರೀ ಕಾ ಜಗದ್ಗುರುಗಳವರ ಸನ್ನಿಧಿಯಲ್ಲಿ

"ಸತ್ಯವಾದಿ"ಯ ವಿಜ್ಞಪ್ತಿ

ದಾಗ್ನಿ ಯುರ್ವಿಧರೆಯೋಳ್ ।
ಬೇರ್ವರಂ ।
ನಿಂದೊಗೆದು ।
ದಿಂ ॥

ವಿಪುಲಂ ।
ಎ ।
ಯಿಂ ಗುರುಪದಂ ।
ಪೀಠಸ್ಥಿತಂ ॥

ಇಲಿರ್ಥಸುಗಂ ವಿನಮ್ರುದೆ ।
ತಮುಂ ಸತ್ಯವಾದಿ ಕರ್ಣಾಟಕದೊಳ್ ॥
ಸಂತರ ನಾ ಶಂಕರ ಚರ ।
ತೇವಾಸಿಗಳಸಬಿಳಪೀಠಾಧಿಪರಂ ॥

ಧರ್ಮ ಸಂಘದ ಈ ಸಾರಿಯ ಸ ಧ್ಯಕ್ಷತೆಯಲ್ಲಿಯೂ, ಸಪ್ತಮೀದಿನ ಮ ಮ್ಮೇಳನಕ್ಕೆ ಜ್ಯೋತಿಷಿ ಪೀಠಾಧೀಶ್ವರ ಹಿಳಾ ಸಮ್ಮೇಳನವು ನಾರಾಯಣಬಾ ಯಿಯ ಅಧ್ಯಕ್ಷತೆಯಲ್ಲಿಯೂ ನಡೆದ ಪು

ಶ್ರೀ ಬ್ರಹ್ಮಾನಂದ ಸರಸ್ವತಿ ಸ್ವಾಮಿಗಳು ಅನ್ಯಕ್ಷರಾಗಿದ್ದರು. ಪುಷ್ಯಾ ಬ. 11 ರಿಂದ ಶುರುವಾಗಿ ಅಮಾವಾಸ್ಯೆ ವರೆಗೆ ಈ ಸಮ್ಮೇಳನವಾಯಿತು. 2 ನೇ ದಿನ ಮೂರನೇ ದಿನ 4 ನೇ ದಿನ ಕಾರ್ಯಕಲಾ ಪಗಳು ಶ್ರೀ ದ್ವಾರಕಾ ಜಗದ್ಗುರುಗಳ ವರ ಅಧ್ಯಕ್ಷತೆಯಲ್ಲಾರಂಭವಾಗಿ ನಡೆ ದವು.

ಸನಾತನ ಧರ್ಮ ಮಂಡಳದ ಆರ ನೇ ಸಮ್ಮೇಳನವು ಮಂಡಲೇಶ್ವರ ವಿ ದಿತನಂದರ ಅಧ್ಯಕ್ಷತೆಯಲ್ಲಿಯೂ, ಪು ಷ್ಯ ಬ 4 ರಲ್ಲಿ ಗೋರಕ್ಷಾ ಸಮ್ಮೇಳನ ವು ಶೇಖ್ ಲ್ ಅಧ್ಯಕ್ಷತೆಯ ಲ್ಲಿಯು. ಹಿಂದೀ ಸಾಹಿತ್ಯ ಸಮ್ಮೇ ಲಾಲ್‌ರಾಯ್ ಅ

ಭೋಪಟ್ಕರರ ಅಧ್ಯಕ್ಷತೆಯಲ್ಲಿ ಅಖಿಂ ಡ ಹಿಂದುಸ್ಥಾನ ಸಮ್ಮೇಳನವೂ ನಡೆ ಯಿತು. ಅಮಾವಾಸ್ಯೆದಿನ ಶ್ರೀ ಲಕ್ಷ ಚಂಡೀ ಮಹಾಯಜ್ಞದ ಪೂರ್ಣಾಹುತಿ ಯಾಗಿ ಮಾರನೇ ದಿನ ಬೊಂಬಾಯಿ ಯು ಮುಖ್ಯ ಮುಖ್ಯ ಬೀದಿಗಳಲ್ಲಿ ದೊ ಡ್ಡ ಮೆರವಣಿಗೆಯಾಗಿ ಚೌಪಾಟೀ ತೀರದಲ್ಲಿ ಅವಭೃಥಸ್ನಾನವು ನಡೆಯಿ ತು.

ಈ ರೀತಿಯಾಗಿ ಮುಂಬಯಿಯಂತ ಹ ನಗರದಲ್ಲಿ ಧಾರ್ಮಿಕ ಮಹೋತ್ಸವ ಗಳು ನಿರ್ವಿಘ್ನವಾಗಿ, ವೈಭವವಾಗಿ ಜ ರುಗಿದವು.

ಶ್ರೀ ಲಕ್ಷ್ಮಚಂಡೀ ಮಹಾಯಜ್ಞ ಮತ್ತು ಧಾರ್ಮಿಕ ಸಮ್ಮೇಳನಗಳು

ಭರತಖಂಡದಲ್ಲಿ ಸನಾತನ ಧರ್ಮ ರಕ್ಷಣೆಗೆ ಪ್ರಯತ್ನಿಸುವ ಸಂಸ್ಥೆಗಳಲ್ಲಿ ಮುಖ್ಯವೆನಿಸಿದ ಕಾಶಿಯ ಅಖಿಲ ಭಾರತ ವರ್ಷೀಯ ಧರ್ಮ ಸಂಘದ ಐದನೇ ವಾರ್ಷಿಕ ಸಮ್ಮೇಳನವು ಕಳೆದ ವರ್ಷ ಬಿಹಾರ್ ಪ್ರಾಂತ್ಯದಲ್ಲಿ ಶ್ರೀ ದ್ವಾರಕಾ ಪೀಠಾಧೀಶ್ವರ ಶ್ರೀ ಜಗದ್ಗುರು ಶ್ರೀ ಅ ಭಿನವ ಸಚ್ಚಿದಾನಂದ ತೀರ್ಥ ಸ್ವಾಮಿಗ ಳವರ ಅಧ್ಯಕ್ಷತೆಯಲ್ಲಿ ಜರುಗಿದ್ದುದ ನರಿಯಷ್ಟೆ ! ಈ ಸಂಘದ ಆರನೇ ವಾರ್ಷಿಕ ಸಮ್ಮೇಳನವು ಇಮೆ ಯಲ್ಲಿ ಬೊಂಬಾಯಿಯಲ್ಲಿ ನ ಡೆಯಿತ್ತು.

ಈ ಸಂದರ್ಭದಲ್ಲಿ ಶ್ರೀ ಲ ಚಂಡೀ ಮಹಾಯಜ್ಞವೂ ಆ ರ್ವ ರೀತಿಯಲ್ಲಿ ನಡೆಯಿತು. ಪುಷ್ಯ ಶು 8 ರಿಂದ ಆರಂಭವಾಗಿ ಪುಷ್ಯ ಬ. ಅ ಮಾವಾಸ್ಯೆ ವರೆಗೆ 21 ದಿನ ಪ್ರಯೋಗಾ ತ್ಮಕವಾಗಿ ಈ ಯಜ್ಞವು ವೈಭವದಿಂದ ನಡೆಯಿತು. ಶತಚಂಡೀ - ಸಹಸ್ರ ಚಂಡೀ ಯಾಗಗಳು ಅಲ್ಲಲ್ಲಿ ನಡೆದರೂ ಲಕ್ಷ ಚಂಡಿಯು ಬಹಳ ಅಪರೂಪ. ಈ ಚೆಗೆ ಅ. ಭಾ. ಧರ್ಮ ಸಂಘದ ಸಂಚಾ ಲಕರಾದ ಶ್ರೀ ಕರವಾತ್ರಿಸ್ವಾಮಿಗಳು ಭರತಖಂಡದಲ್ಲೀಗ ಇಂತಹ ಮಹಾಯ ಜ್ಞಗಳನ್ನು ಆರಂಭಿಸಿದ್ದಾರೆ. ಲಕ್ನೋ ಉದಯಪುರಗಳಲ್ಲಿ ಈ ಲಕ್ಷ ಚಂಡೀ ಯಜ್ಞವನ್ನು ನಡೆಸಿ, ಮೂರನೇದಾಗಿ ಇ ದನ್ನು ಬೊಂಬಾಯಿನಲ್ಲಿ ನಡೆಸಿದರು. ಈ ಮಹಾಸಮಾರಂಭಗಳಿಗಾಗಿ ಸ ಮುದ್ರ ತೀರದ ಮೆರೀನ್ ಡ್ರೈವ್‌ನ ಲ್ಲಿ 'ಧರ್ಮ ನಗರ' ವೆಂಬ ಹೆಸರಿನ ಪೊಡ್ಡ ಪಟ್ಟಣದಂತೆ ಸಭಾ ಮಂಟ ಯಜ್ಞಶಾಲಾದಿಗಳು ರಚಿತವಾಗಿ ದ್ದವು ಯಜ್ಞಕ್ಕೆ ಬಾಪ್ಪಣರು 1500 ಮಂದಿ 100 ಅದಲ್ಲದೆ 108 ಭಾಗವತ ಪಾ ರಾಯಣಾದಿಗಳೂ ಇದ್ದವು. ಅಧ ರ್ಮ ನಿವೃತ್ತಿ ಪೂರ್ವಕವಾಗಿ ಸನಾತನ ಧರ್ಮ ಸಂಸ್ಥಾಪನೆಯೇ ಈ ಯಜ್ಞದ ಉದ್ದೇಶವಾಗಿರಿತ್ತು.

ನಮ್ಮ ವಿಶೇಷ ಸಂಚಿಕೆ

ಪ್ರಬೋಧದ ಈ ವಿಶೇಷ ಸಂಚಿಕೆ ಯನ್ನು ನೋಡಿ ವಾಚಕರಿಗೆ ಸಂತೋ ಷವಾಗದಿರದು. ಬೊಂಬಾಯಿನಲ್ಲಿ ಈಚೆಗೆ ನಡೆದ ಜನವರಿಯಲ್ಲಿ ನಡೆದ ಶ್ರೀ ಲಕ್ಷ ಚಂಡೀ ಮಹಾಯಜ್ಞ ಮತ್ತು ಅಖಿಲ ಭಾರತವರ್ಷೀಯ ಧರ್ಮ ಸಂಘದ ಮ ಹಾ ಸಮ್ಮೇಳನ ಮತ್ತಿತರ ಸಮ್ಮೇಳನಗ ಳ ಸಂಕ್ಷಿಪ್ತ ವಿವರವೂ, ಆರ್ಟ್ ಪೇ ಪರಿನಲ್ಲಿ ಆ ಸಮಾರಂಭದ 16 ಚಿತ್ರಗ ಳೂ ಇದರಲ್ಲಿ ಬಂದಿವೆ. ಇದರಿಂದ ಕರ್ಣಾಟಕದವರು ಬೊಂಬಾಯಿಯ ಆ ಮಹಾ ಸಮಾರಂಭದ ಪರಿಚಯವನ್ನು ಹೊಂದಬಹುದಾಗಿದೆ.

ಇಷ್ಟು ಫೋಟೋ ಬ್ಲಾಕುಗಳು ಮತ್ತು ಆರ್ಟ್ ಪೇಪರಿಗಾಗಿ ಖರ್ಚು ಬೆಚ್ಚಾಗಿಯೇ ಆಗಿದೆಯೆಂದು ಪ್ರತ್ಯೇ ಕಿಸುವುದು ಬೇಡವಷ್ಟೆ ! ಈ ಅಂಕದ ಸಂಪೂರ್ಣ ಖರ್ಚು ಶ್ರೀ ದ್ವಾರಕಾ ಜಗದ್ಗುರುಗಳವರಿಂದ ಅನುಗೃಹೀತವಾ ದುದಕ್ಕಾಗಿ ವಾಚಕರ ಪರವಾಗಿ ನಾ ವು ಶ್ರೀಗಳವರಿಗೆ ಸವಿನಯ ಧನ್ಯವಾ ದಗಳನ್ನರ್ಪಿಸುತ್ತೇವೆ.

ವಾಚಕರು ಪ್ರೋತ್ಸಾಹಕೊಟ್ಟರೆ ಇಂತಹ ವಿಶೇಷಾಂಕಗಳು ಆಗಾಗ ಪ್ರ ಕಟವಾಗಬಹುದು. ವಾಚಕರು ಈ ವಿ ಷಯದ ಕಡೆಗೆ ಗಮನಕೊಡುವರಾಗಿ ಸಂಬಿದೆ.

ಸಂಪಾದಕ 'ಪ್ರಬೋಧ'.

ಆತ್ಮನಿವೇದನ

ದೇಶದಲ್ಲಿ ಎಲ್ಲೆಲ್ಲಿಯೂ ರಾಗದ್ವೇಷಾದಿಗಳೂ, ತನ್ನಿಮಿತ್ತವಾಗಿ ಅಶಾಂತಿಯೂ, ಹಾಹಾಕಾರವೂ ಹೆಚ್ಚುತ್ತಿದೆ ಆಸುರೀ ಸಂಪತ್ತಿರೂಪವಾದ ಅಧರ್ಮವೇ ಇದಕ್ಕೆ ಕಾರಣ. ಇಂತಹ ಅಕಲ್ಯಾಣಕಾರಕವೂ ನಾಶಕಾರಕವೂ ಆದ ಅಧರ್ಮವನ್ನು ನಿವಾರಿಸಿ, ಸರ್ವಕಲ್ಯಾಣಕಾರಿಯೂ, ಶಾಂತಿಪ್ರದವೂ ಆದ ಆರ್ಯ ವೈದೀಕ ಸನಾತನಧರ್ಮವನ್ನು ಪ್ರಚಾರ ಮಾಡುವುದಕ್ಕಾಗಿ ಹಿಂದೂ ಸಾಂಸ್ಥದ ಪ್ರಾಯಃ ಎಲ್ಲಾ ಕಡೆಗಳಲ್ಲಿಯೂ ಪ್ರಯತ್ನಗಳು ನಡೆಯುತ್ತಿವೆ. ಈ ರೀತಿಯ ಪ್ರಯತ್ನವು ಬೇರೆಬೇರೆ ಪ್ರಾಂತ್ಯಗಳಲ್ಲಿ ನಡೆಯುತ್ತಿದ್ದರೂ ನಮ್ಮ ಕರ್ಣಾಟಕದಲ್ಲೇನೂ ಸಂಘಟಿತ ಪ್ರಯತ್ನವು ನಡೆಯದಿರುವುದನ್ನು ಕಂಡು ವಿಷಾದಿಸಿ ಈ ಪ್ರಯತ್ನಕ್ಕಾಗಿ ಶ್ರೀ ದ್ವಾರಕಾ ಪೀಠಾಧೀಶ್ವರರಾದ ಶ್ರೀ ಜಗದ್ಗುರು ಶ್ರೀ ಅಭಿನವ ಸಚ್ಚಿದಾನಂದತೀರ್ಥ ಸ್ವಾಮಿಗಳವರು ತೀರ್ಥಹಳ್ಳೀ ತಾಲ್ಲೂಕು ಮುಳುಬಾಗಿಲಿನಲ್ಲಿರುವತಮ್ಮ ಶ್ರೀ ಮಠದಲ್ಲಿ 4-ನೆ ವರ್ಷದಲ್ಲಿ ಹಿಂದೆ ಮೈಸೂರು ದೇಶೀಯ ವರ್ಣಾಶ್ರಮ ಸ್ವರಾಜ್ಯ ಸಂಘವನ್ನು ಸ್ಥಾಪಿಸಿದರು. ಈ ಸಂಘವು ಮೇಲ್ಕಂಡ ಉದ್ದೇಶ ಸಾಧನೆಗಾಗಿ ಇಡೀ ಕರ್ಣಾಟಕ ದೇಶದಲ್ಲಿ ಸಭೆ, ಸಮ್ಮೇಳನ, ಹಸ್ತ ಪತ್ರ, ಪುಸ್ತಕ ಮುಂತಾದ ವಿವಿಧ ಸಾಧನಗಳಿಂದ ಪ್ರಯತ್ನಿಸುತ್ತಿರುವುದು ಸರ್ವವಿದಿತವಾದುದು.

ವ್ಯವಸ್ಥಿತವಾದ ಪ್ರಚಾರಕಾರ್ಯಕ್ಕಾಗಿ ಮುಖ್ಯ ಅಂಗವಾಗಿ ಪ್ರಬೋಧ ಮಾಸಿಕ ಪ್ರಕಟನ ಮಾಲೆಯು 4-5 ವರ್ಷದಿಂದಲೂ ಪ್ರಕಟವಾಗುತ್ತಿದ್ದುದೂ, ಆದರ ಚಂದಾ ಇಡೀ ಕರ್ಣಾಟಕದಲ್ಲೇ ಅತಿ ಕಮ್ಮಿಯಾಗಿದ್ದು, ವಿಷಯಗಳು ಅತಿ ಮೋಘವಾಗಿ ಪ್ರಕಟವಾಗುತ್ತಿದ್ದುದೂ ಸರ್ವವಿದಿತವೇ ಇದೆ.

ಕಾದಂಬರೀ ಸಂಗ್ರಹ ಪತ್ರಿಕಾ ಸಂಪಾದಕರಾಗಿದ್ದ ವೇ|| ಚಾ|| ವೆಂಕಟರಮಣ ಶಾಸ್ತ್ರಿಗಳು ಒಂದೂವರೆ ವರ್ಷದ ಹಿಂದೆ ಅಕಾಲ ನಿಧನರಾಗಲು ಮಾನಸಿಕ ರೂಪವಾದ ಪ್ರಭೋಧ ಪ್ರಕಟನೆಗೆ ವಿಘ್ನ ಬಂದು ನಿಲ್ಲಿಸಬೇಕಾದ ಸಂಭವವೊದಗಿತು.

ಅನಂತರ ಸಂಘದ ಕಾರ್ಯವನ್ನು ಮುಂದುವರಿಸಲೇಬೇಕೆಂದೂ ಶ್ರೀ ಜಗದ್ಗುರುಗಳವರ ಉತ್ಸಾಹ ಪೂರ್ಣ ಅಭಿಪ್ರಾಯವಿದ್ದರಿಂದ 'ಸತ್ಯವಾದಿ' ಸಂಪಾದಕರಾದ ಮ|| ರಾ|| ಕೃಷ್ಣರಾಯರೊಂದಿಗೆ ಪತ್ರವ್ಯವಹಾರ ನಡೆಸಲಾಗಿ ಸ್ವಲ್ಪವೇ ಮೂಲ್ಯದಲ್ಲಿ ಪ್ರತಿವಾರವೂ ಒಂದು ಪುಟ 'ಪ್ರಭೋಧ' ಕ್ಕೆ ಮೀಸಲಾಗಿ ಮುದ್ರಿಸಿಕೊಡಲು ಕೃಪೆಯಿಂದ ಒಪ್ಪಿದರು. ಅದರಂತೆ ಸತ್ಯವಾದಿಯಲ್ಲಿ ಪ್ರಭೋಧವು 30 ಸಂಚಿಕೆಗಳಿಂದ ಸಾಪ್ತಾಹಿಕ ಪ್ರಕಟನಮಾಲಾ ರೂಪವಾಗಿ ಕ್ರಮವಾಗಿ ಬರುತ್ತಿರುವುದೂ ವಾಚಕರಿಗೆ ವಿದಿತವೇ ಇದೆ. ಈ ರೀತಿಯಾಗಿ ಪ್ರಬೋಧನವು ತನ್ನ ಮಾಸಿಕ ಸ್ವರೂಪವನ್ನು ಬಿಟ್ಟು ಸಾಪ್ತಾಹಿಕರೂಪದಿಂದ ಪ್ರಕಟವಾದದು ಒಂದು ತರಹದಿಂದ ಉತ್ತಮವೇ ಆಯಿತು. ಇದರಿಂದ ಹೊಸ ಜೊಸ ಧಾರ್ಮಿಕ ಸಮಾಚಾರಗಳು ಪ್ರಕಟವಾಗುವಂತಾ ಈ ರೀತಿ ಪ್ರಬೋಧವು ಉತ್ಕರ್ಷ ಹೊಂದಿದೆಯೆನ್ನಬಹುದು.

ಶ್ರೀ ದ್ವಾರಕಾ ಜಗದ್ಗುರುಗಳು ಈ ಮೂರು ವರ್ಷಗಳಿಂದ ದ್ವಾರಕ್ಷಾ ಪ್ರಾಂತ್ಯದಲ್ಲಿ ಅಂದರೆ ಪಶ್ಚಿಮ ಹಿಂದುಸ್ಥಾನ ಉತ್ತರ ಭಾರತದಲ್ಲಿ ಸಂಚರಿಸುತ್ತಿರುವುದರಿಂದಲೂ ವ. ಸ್ವ. ಸಂಘದ ಕಾರ್ಯದರ್ಶಿ ಮತ್ತು ಪ್ರಬೋಧದ ಸಂಪಾದಕ ಮಹಾಬಲಭಟ್ಟರು ಶ್ರೀ ಜಗದ್ಗುರುಗಳೊಂದಿಗೆ ಇರುತ್ತಿರುವುದರಿಂದಲೂ, ಸಂಘದ ಕೆಲವು ಚಟುವಟಿಕೆಗಳು ನಿಧಾನವಾಗಿ ಮೊದಲಿಂದಲೇ ಅಲ್ಪ ಮಾತ್ರವಾದರೂ ಇದ್ದ ಆದಾಯವು ಈಗ ಸಂಪೂರ್ಣವಾಗಿ ನಿಂತುಹೋಗಿದೆ ಈಗ ಕೇವಲ ಶ್ರೀ ಶ್ರೀಗಳವರ ಉದಾರ ಸಹಾಯ ಮಾತ್ರದಿಂದಲೇ ಪ್ರಬೋಧವು ನಡೆಯುತ್ತಿದೆ, ಮತ್ತು ಸಂಘದ ಕಾರ್ಯಗಳು ನಡೆಯುತ್ತಿವೆ.

ಸತ್ಯವಾದಿಯನ್ನು ಕರ್ಣಾಟಕದ ಸಮಸ್ತ ಮಠಾಧೀಶ್ವರರಿಗೂ, ಧಾರ್ಮಿಕ ಮುಖಂಡರಿಗೂ, ಅವರ ಸಹಕಾರದ ಪ್ರತೀಕ್ಷೆಯಿಂದ ಪತ್ರಿಕೆಯನ್ನು ಕಳಿಸುತ್ತಾ ಬರುತ್ತಿರಲಾಗಿದೆ. ಈ ಮೇಲ್ಕಂಡ ಮಹನೀಯರಿಗಾಗಿ ಚಂದಾ ಹಣವನ್ನು ಸತ್ಯವಾದಿಗೆ 'ಸಂಘ' ವು ಸಲ್ಲಿಸಿದೆ.

ಮೇಲ್ಕಂಡ ಮಹನೀಯರಿಗೆ ಈ ವಿಷಯವನ್ನೆಲ್ಲಾ ವಿವರಿಸಿ, ಸತ್ಯವಾದಿಯ ಮೂಲಕವಾಗಿಯೂ, ಪತ್ರದ ಮೂಲಕವೂ ವಿನಂತಿಸಿದೆ. ಎಷ್ಟು ಸಾರಿ ವಿನಂತಿಸಿದರೂ ಸಹಾಯವಾಗಲೀ, ಸಹಕಾರವಾಗಲೀ, ಚಂದಾ ಆಗಲಿ ಬಂದಿಲ್ಲವೆಂದು ಹೇಳಲು ತುಂಬಾ ವಿಷಾದವಾಗುತ್ತದೆ.

ಪ್ರಬೋಧವನ್ನು ೨ ಪುಟಗಳಲ್ಲಿ ಪ್ರಕಟಿಸಬೇಕೆಂದು ಎಷ್ಟೋ ಸಜ್ಜನರಿಂದ ಸೂಚನೆ ಬರುತ್ತಿದೆ. ನಮಗೂ ಹಾಗೆ ಮಾಡಲಿಚ್ಛೆಯಿದೆ. ಅದರಿಂದ ಉತ್ತಮೋತ್ತಮ ಲೇಖನಗಳೂ, ವಿಷಯಗಳೂ ಸಂಯಾಗ್ವಿ ಪ್ರಕಟವಾಗಲು ಅನುಕೂಲವೂ ಆಗುತ್ತದೆ. ಆದರೆ ಮೇಲ್ಕಂಡಂತೆ ಪರಿಸ್ಥಿತಿಯಿರುವುದರಿಂದ ಹೇಗೆ ಮುಂದುವರಿಸೋ

ಸುಧಾರಕರಿಂ ೀರಿತ
ಸಂಸ್ಥೆಗಳಲ್ಲಿ ಸ
ಸ್ಥಿತಿ ಂ
ಬೋ ಉ
ದಾರ ಭಾವನೆಯಿ ುವುದು
ಕರ್ಣಾಟಕದ ದ ರಿ.

ಈಗಾದರೂ ಕರ್ಣಾಟಕದ ಎಲ್ಲಾ ಮಠಾಧಿಪತಿಗಳೂ, ಧರ್ಮಾಭಿಮಾನಿಗಳೂ ಈ ಕಡೆ ಗಮನಕೊಟ್ಟು 'ಸಂಘ' 'ಪ್ರಬೋಧ' ಗಳಿಗೆ ಆಶ್ರಯವಿತ್ತು ಕರ್ಣಾಟಕ ದೇಶದಲ್ಲಿ ಧರ್ಮ ಪ್ರಚಾರ ಕಾರ್ಯವನ್ನು ಯಶಸ್ವಿಯಾಗಿ ನಡೆಯಿಸಲಿಂದು ಪುನಃ ಪುನಃ ವಿನಂತಿ

ಇನ್ನೂ ಚಂದಾ ಕಳಿಸದಿರುವವರು ಕೂಡ್ಲೆ ಕೆಳಗಿನ ವಿಳಾಸಕ್ಕೆ ಕಳಿಸಬೇಕಾಗಿಯೂ, ವ. ಸ್ವ. ಸಂಘದ ಸದಸ್ಯರೂ ಅಭಿಮಾನಿಗಳೂ, ಹಿಂದಿನ ಪ್ರಬೋಧದ ಚಂದಾದಾರರೂ ಸತ್ಯವಾದಿಗೆ ಕೂಡ್ಲೆ ಚಂದಾದಾರರಾಗಬೇಕೆಂದೂ ಬಿನ್ನಹ,

ವ್ಯವಸ್ಥಾಪಕ
ಮೈ. ದೇ. ವ. ಸ್ವ. ಸಂಘ
ಪುರಂ
ಲ್ಲೂಕು ,

ದ್ವಾರಕೆಯಲ್ಲಿ ಧಾರ್ಮಿಕ ಸಮಾರಂಭ

ಇದೇ ಫಾಲ್ಗುಣ ಬಹುಳ ಬಿದಿಗೆಯಿಂದ ಸಪ್ತಮಿವರೆಗೆ (ತಾ|| 9-3-47 ರಿಂದ 14-3-47) ದ್ವಾರಕೆಯಲ್ಲಿ ಶ್ರೀ ಜಗದ್ಗುರುಗಳವರ ಆಶ್ರಯದಲ್ಲಿ ಅನೇಕ ಧಾರ್ಮಿಕ ಸಮಾರಂಭಗಳು ನಡೆದವು.

ವಿಶ್ವಶಾಂತಿಗಾಗಿ ಶ್ರೀ ವಿಷ್ಣು ಮಹಾಯಾಗವು ಬಿದಿಗೆ ದಿನ ಆರಂಭವಾಗಿ ಷಷ್ಠೀ ದಿನ ಪೂರ್ಣಾಹುತಿಯಾಯಿತು.

ಸನಾತನಧರ್ಮ ಸಮ್ಮೇಳನವು ಚತುರ್ಥೀ ದಿನ ಆರಂಭವಾಗಿ ಷಷ್ಠೀ ದಿನದವರೆಗೆ ಯಶಸ್ವಿಯಾಗಿ ನೆರವೇರಿತು. ಗು ಾತ್, ಕಚ್, ಕಾಥಿವಾರದಿಂದ ವಿ ು ಬಂದಿದ್ದರು. ವಿವಿಧ ಧಾ ಚರ್ಚೆಯಾಗಿ ಸಭೆ ುಗಳಾದವು.

ಸಮ್ಮೇಳನದ ಅಂಗವಾಗಿ ಧಾರ್ಮಿ ಸಾಹಿತ್ಯ ಪ್ರದರ್ಶನವೂ ಏರ್ಪಟ್ಟಿದ್ದಿತು. ಬಿದಿಗೆ ದಿನ ಇದರ ಆರಂಭೋತ್ಸವವಾಗಿ ಸಪ್ತಮೀವರೆಗೆ ಈ ಪ್ರದರ್ಶನವು ಸುಂದರವಾಗಿ ನಡೆದು, ಸಪ್ತಮ್ಯಿದಿನ ಪ್ರದರ್ಶನಕ್ಕೆ ಬಂದ ಉತ್ತಮ ವಸ್ತುಗಳಿಗೆ ಪ್ರಮಾಣ ಪತ್ರವನ್ನು ಕೊಡಲಾಯಿತು.

ಸಮ್ಮೇಳನದಲ್ಲಿ ಪಂ. ಮಾಳವೀಯರು, ಗೋಸ್ವಾಮಿ ಗೋಕುಲನಾಥರು ಮುಂತಾದವರ ವಿಯೋಗದ ಶೋಕ ಪ್ರಸ್ತಾಪವೂ, ಸರ್ವ ವಿಧಾಭ್ಯುದಯ ಮೂಲಭೂತವಾದ ಧರ್ಮವನ್ನೆಲ್ಲರೂ ಆಚರಿಸಬೇಕೆಂಬ ಠರಾವು, ಅಲ್ಲಲ್ಲಿ ಬರುತ್ತಿರುವ ಧರ್ಮ ವಿರೋಧಿ ಶಾಸನಗಳನ್ನು ತಡೆಯುಬೇಕೆಂಬ ರಣವೂ ದ್ವಾರಕೆಯ ಸ್ಥಾಪಿಸಲ್ಪಡುವ ಶ್ರೀ ದ್ವಾರಕಾಧೀಶ ವಿಶ್ವವಿದ್ಯಾಪೀಠವನ್ನು ಸ್ಥಾಪಿಸುವ ಠರಾವೂ ಗೋವಧೆಯನ್ನು ನಿರೋಧಿಸುವ ಠರಾವೂ ಸರ್ವಾನುಮತದಿಂದ ಪಾಸಾದವು.

ವಿಶೇಷಹಾಗೂ ಸಾಮಾನ್ಯ ಮಾನವ ಧರ್ಮ

——

ಧರ್ಮವು ವನಸಯು ಕೊಡಡಿಯಲ್ಲಾಗಲಿ ನಗರದ ದೇವಾಲಯದಲ್ಲಾಗಲಿ, ದೇವನದಿಯ ತಟದಲ್ಲಾಗಲಿ ಇದ್ದು ಬೇರೆಲ್ಲೂ ಇಲ್ಲದ ಅಥವಾದಿನದಲ್ಲಿ ಮೂರು ಅಥವಾ ಐದು ವೇಳೆ ಇದ್ದು ಬೇರೆ ಸಮಯದಲ್ಲಿಲ್ಲದಂತಹ ವಸ್ತುವೇನೂ ಅಲ್ಲ. ಧರ್ಮವು ಎಲ್ಲೆಲ್ಲಿಯೂ ಎಲ್ಲಾ ಕಾಲದಲ್ಲಿಯೂ ಇರುವಂತಹ ವಸ್ತು. ಅಲ್ಲಿ ಬೇರೇನೂ ಇಲ್ಲದೆ ಹೋದಾಗ್ಯೂ ಧರ್ಮವೇನೋ ಇದ್ದೇ ಇರುತ್ತದೆ, ಮಾತ್ರವಲ್ಲ ಮಾನವನು ಮಡಿದು ಒಬ್ಬಂಟಿಗನಾಗಿ ಇಲ್ಲಿಂದ ಹೊರಡುವಾಗ ಧರ್ಮವೇ ಅವನೊಟ್ಟಿಗಿರುತ್ತದೆ. 'ಮೃತಂ ಶರೀರ ಮುತ್ಸೃಜ್ಯ ಕಾಷ್ಠಲೋಷ್ಠಸಮಂ ಕ್ಷಿತೌ॥ ವಿಮುಖಾ ಬಾಂಧವಾ ಯಾಂತಿ ಧರ್ಮಸ್ತಮನುಗಚ್ಛತಿ (ಮನುಸ್ಮೃತಿ) ಸತ್ತ ಶರೀರವನ್ನು ಅಥವಾ ಮಣ್ಣು ಹೆಂಟೆಯಂತೆ ಮೇಲೆಸೆದು ಮುಖ ತಿರುಗಿಸಿಕೊಂಡು ಸರಿಯುತ್ತಾರೆ. ಕೇವಲ ಒಂದು ಧರ್ಮವು ಮಾತ್ರ ಅವನನ್ನು ಹಿಂಬಾಲಿಸಿಕೊಂಡು ಹೋಗುತ್ತದೆ.'

ತಾತ್ಪರ್ಯವೇನೆಂದರೆ ಮನುಷ್ಯನ ಸಂಗಡ ಪ್ರತಿಸ್ಥಳದಲ್ಲಿ ಪ್ರತಿ ಸಮಯದಲ್ಲಿ ಪ್ರತಿಸ್ಥಿತಿಯಲ್ಲಿ ಧರ್ಮವು ಅಂಟಿಕೊಂಡಿದೆ ಹಾಗೂ ಮನುಷ್ಯನಿಗೆ ಧರ್ಮ ಮತ್ತು ಅಧರ್ಮವನ್ನು ವಿವೇಚಿಸುವುದೂ ಧರ್ಮವನ್ನು ಪರಿಗ್ರಹಿಸಿ ಅಧರ್ಮವನ್ನು ತ್ಯಜಿಸುವುದೂ ಅವಶ್ಯಕವಿಲ್ಲದಿರುವಂತಹ ಯಾವುದೇ ಸ್ಥಳವಾಗಲೀ, ಯಾವುದೇ ಸಮಯವಾಗಲೀ, ಯಾವುದೇ ಪರಿಸ್ಥಿತಿಯಾಗಲೀ ಇರುವುದಿಲ್ಲ ಆದುದರಿಂದಲೇ ಧರ್ಮಶಾಸ್ತ್ರಗಳು ಯುಗಧರ್ಮ ಜಾತಿಧರ್ಮ ಕುಲಧರ್ಮ ನಿತ್ಯಧರ್ಮ ನೈಮಿತ್ತಿಕ ಧರ್ಮ ಸಕಲಮಧರ್ಮ ನಿಷ್ಕಾಮಧರ್ಮ ಆಪದ್ಧರ್ಮ ವರ್ಣಧರ್ಮ ಆಶ್ರಮಧರ್ಮ ಮುಂತಾಗಿ ಮನುಷ್ಯನ ಎಲ್ಲಾ ಪ್ರಕಾರದ ಅವಸ್ಥೆಗಳ ಧರ್ಮಗಳನ್ನು ತಿಳಿಸಿವೆ. ದೇಶ ಕಾಲ ಮತ್ತು ಪಾತ್ರದ ಭೇದದಿಂದ ಬೇರೆ ಬೇರೆ ಧರ್ಮಗಳು ಬೇರೆ ಬೇರೆ ಮನುಷ್ಯರ ಸಲುವಾಗಿ ಇರುತ್ತವೆ. ಉದಾ- ಸತ್ಯಯುಗಕ್ಕೆ ಯಾವುದು ಧರ್ಮವೋ ಅದೇ ಇದ್ದುದಿದ್ದಂತೆ ಕಲಿಯುಗಕ್ಕೆ ಧರ್ಮವಲ್ಲ. ಸ್ತ್ರೀಯರಿಗೆ ಯಾವುದು ಧರ್ಮವೋ ಅದೇ ಪುರುಷರ ಧರ್ಮವಲ್ಲ ಒಬ್ಬ ಋಷಿಯ ಕುಲದಲ್ಲಿಯಾವನಿ ಶೇಷ ಧರ್ಮವು ನಡೆದು ಬರುತ್ತದೆಯೋ ಅದೇ ಇನ್ನೊಬ್ಬ ಋಷಿಯ ಕುಲದಲ್ಲಿ ಸ್ವಲ್ಪ ಬೇರೆ ಬಗೆಯದಾಗಿರಬಹುದು. ಬ್ರಾಹ್ಮಣರಿಗೆ ಯಾವುವು ನಿತ್ಯ ಧರ್ಮಗಳೋ ಅವುಗಳಿಗಿಂತ ಕ್ಷತ್ರಿಯರ ನಿತ್ಯ ಧರ್ಮಗಳು ಸ್ವಲ್ಪ ಭಿನ್ನವಾಗಿರಬಹುದು ಒಂದು ನಿಮಿತ್ತದಿಂದ ಮಾಡಲ್ಪಡುವ ಒಂದು ಧರ್ಮವು ಅನ್ಯ ನಿಮಿತ್ತದಿಂದ ಮಾಡಲ್ಪಡುವ ಧರ್ಮಕ್ಕಿಂತ ಬೇರೆಯಾಗಿರಬಹುದು. ಒಂದು ಇಚ್ಛೆಯ ಪೂರ್ತಿಗಾಗಿ ಮಾಡಲ್ಪಡುವ ಧರ್ಮವೂ ಕೂಡ ಅದೇ ಪ್ರಕಾರ ಅನ್ಯ ಇಚ್ಛೆಯ ಪೂರ್ತಿಗಾಗಿ ಮಾಡಲ್ಪಡುವ ಧರ್ಮಕ್ಕಿಂತ ಭಿನ್ನವಾಗಿರಬಹುದು ನಿಷ್ಕಾಮ ಧರ್ಮಗಳೂ ಸಕಾಮ ಭೇದದಿಂದ ಬೇರೆ ಬೇರೆಯ ಧರ್ಮ ಶಾಸ್ತ್ರಗಳು ನಿರೂಪಿಸಿರುವುದು ಸ್ವಾಭಾವಿಕವೇ ಆಗಿದೆ.

ಬೌದ್ಧ, ಕ್ರೈಸ್ತ, ಜೈನ, ಇಸ್ಲಾಮಿ ಯಹೂದಿ, ಪಾರಸಿ ಮುಂತಾದ ಧರ್ಮಗಳೂ ಕೂಡ ಇದೇ ತೆರನಾಗಿ ವಿಶೇಷ ಧರ್ಮಗಳು ಯಾವುವು ಯಾರಿಗಾಗಿವೆ ಯೋ ಅವು ಅವರಿಗೆ ಮಟ್ಟಿಗೆ ಹೊರತು ಸರ್ವರಿಗಾಗಿ ಅಲ್ಲ.

ಎಲ್ಲಾ ಮನುಷ್ಯರಿಗೆ ಸಮಾನ ಧರ್ಮವಾಗಿರುವುದನ್ನೇ ನಾವು ಸಾಮಾನ್ಯ ಮಾನವ ಧರ್ಮವೆನ್ನಬಹುದು, ಹಾಗೂ ಯಾವುದಾದರೂ ವಿಶೇಷ ಧರ್ಮವನ್ನು ಅರಿಯಲವುದಕ್ಕಾಗಿ ಮೊದಲು ಯಾವುದರ ಆಚರಣೆಯಿಂದ ಮನುಷ್ಯನು ಮನುಷ್ಯನಾಗುವನೋ ಎಲ್ಲಾ ಮನುಷ್ಯರ ಆ ಸಾಮಾನ್ಯ ಮಾನವ ಧರ್ಮವನ್ನೇ ಅರಿತುಕೊಳ್ಳಬೇಕು. ಮನುಷ್ಯನು ಪಶುಕೋಟಿಯಿಂದ ಮೇಲಕ್ಕೆದ್ದು ಮನುಷ್ಯನಾಗಿ ಕೊಳ್ಳದಿರುವವರೆಗೆ ಆತನು ಯಾವುದಾದರೊಂದು ವಿಶೇಷ ಧರ್ಮಕ್ಕೆ ಅಧಿಕಾರಿಯಾಗುವುದಾದರೂ ಹೇಗೆ? ಯಾವ ಮನುಷ್ಯನಲ್ಲಿ ಮನುಷ್ಯತ್ವವಿಲ್ಲವೊ ಮಾನವಧರ್ಮವಿಲ್ಲವೂ ಅವನು ಬ್ರಾಹ್ಮಣ ಧರ್ಮವನ್ನಾಗಲಿ ಕ್ಷತ್ರಿಯ ಧರ್ಮವನ್ನಾಗಲಿ ಪಾಲಿಸುವುದೆಂತು? ದ್ವಿಜನಾಗುವುದಾದರೋ ಒಂದು ವಿಶೇಷ ಅಧಿಕಾರದ ಮಾತು. ಯಾವ ಮನುಷ್ಯನಲ್ಲಿ ಮನುಷ್ಯತ್ವವಿಲ್ಲವೊ ಅತನು ದ್ವಿಜನ ಪದವಿಯನ್ನು ಪಡೆದಾದರೂ ಮಾಡುವುದೇನು? ಯಾವನು ಅಕ್ಷರ ಮಾಲೆಯನ್ನಾದರೂ ಕಲೆತಿಲ್ಲವೊ, ಅವನು ವೇದಗ್ರಂಥಗಳ ಪೊತ್ತಿಗೆಯನ್ನು ಕೈಯಲ್ಲಿತ್ತಿಕೊಂಡು ಮೆರೆಯುವುದೆಂತು? ಅವೆಷ್ಟು ವಿಶೇಷ ಧರ್ಮಗಳಿರುವುವೂ, ಅವೆಲ್ಲವುಗಳಿಗೆ ಅಡಿಗಟ್ಟಿಂದರೆ ಸರ್ವರ ಸಾಮಾನ್ಯ ಧರ್ಮ–ಮಾನವ ಧರ್ಮ. ಮಾನವ ಧರ್ಮವು ಬೀಜ. ವಿಶೇಷ ಧರ್ಮವು ಅದರ ಫಲ ಯಾವಾಗ ಮನುಷ್ಯನು ಮೂಲ ಸ್ವರೂಪವಾದ ಮಾನವ ಧರ್ಮವನ್ನು ಮರೆತು ಬಿಟ್ಟು ಫಲ ಸ್ವರೂಪವಾದ ವಿಶೇಷ ಧರ್ಮದ ಅಭಿಮಾನಿಯಾಗುವನೊ ಆಗಾತನು ಧರ್ಮ ವೃಕ್ಷದ ಮೂಲಕ್ಕೆ ನೀರೆರೆಯುವುದನ್ನು ಬಿಟ್ಟು ಫಲ–ಪುಷ್ಪ ಪತ್ರಗಳಿಗೆ ನೀರನ್ನು ಬಿಟ್ಟಂತೆಯೇ ಸರಿ. ಇದರಿಂದ ಧರ್ಮ ವೃಕ್ಷವು ಒಣಗಿ ಹೋಗುವುದು – ಉದಾಹರಣೆಗಾಗಿ ಇಂದದು ಆಗುತ್ತಲೇ ಇದೆ ಎಲ್ಲರಿಗೂ ತಮ್ಮ ತಮ್ಮ ವಿಶೇಷ ಧರ್ಮದಲ್ಲೊಂದು ಬಗೆಯ ಅಭಿಮಾನವಿದೆ, ಆದನ್ನೇ ರಕ್ಷಿಸುವ ಚಿಂತೆಯೂ ಇದೆ. ಆದರೆ ಮೂಲವಾದ ಆದಾವ ಮಾನವಧರ್ಮವಿದೆಯೋ ಅದನ್ನು ಎಲ್ಲಾ ಕಡೆಯಿಂದ ಉಪೇಕ್ಷಿಸಲಾಗುತ್ತದೆ. ಇದೇ ಕಾರಣದಿಂದ ಧರ್ಮದ ಹೆಸರಿನಲ್ಲಿ ಮಾಡಲ್ಪಡುವ ಅನೇಕ ಕಾರ್ಯಗಳು ಅಧರ್ಮವನ್ನೇ ಪ್ರಚಾರ ಮಾಡುವವುಗಳಾಗುತ್ತವೆ. ಇದರಿಂದ ವಿಶೇಷ ಧರ್ಮಗಳ ರಕ್ಷಣೆಯಾಗುವುದೂ ಇಲ್ಲ. ವಿಶೇಷ ಧರ್ಮದ ಪಾಲನೆಯು ಮೂಲ ಮಾನವ ಧರ್ಮದ ರಕ್ಷಣೆಯಾದಾಗಲೇ ಚೆನ್ನಾದ ರೀತಿಯಲ್ಲಿ ಆದೀತು. ಅದುದರಿಂದ ಯಾವುದು ಎಲ್ಲಾ ವಿಶೇಷ ಧರ್ಮಗಳ ಮೂಲದಲ್ಲಿದೆಯೋ ಮತ್ತದರಿಂದ ಜಗತ್ತಿನ ಎಲ್ಲಾ ಮನುಷ್ಯರು ಯಾವುದನ್ನು ಮನ್ನಿಸುವರೋ ಆ ಸಾಮಾನ್ಯ ಮಾನವ ಧರ್ಮವನ್ನೇ ಅರಿತುಕೊಳ್ಳಬೇಕು. ಈ ಮಾನವ ಧರ್ಮವು ಮನುಷ್ಯನ ಮನುಷ್ಯತ್ವವಾಗಿದೆ. ಮತ್ತದರಿಂದಲೇ ಆಮೇಲೆ ದೇವತ್ವವು ಪ್ರಾಪ್ತವಾಗುವುದು.

ನವಭಾರತೀ

ಶ್ರೀ ದ್ವಾರಕಾ ಪೀಠಾಧೀಶ್ವರ ಶ್ರೀ ಮಜ್ಜಗದ್ಗುರುಗಳವರ ಆಶ್ರಯದಲ್ಲಿ ಸನಾತನ ಧರ್ಮ, ಸಂಸ್ಕೃತಿ, ಕಲಾ, ವಿದ್ಯಾ; ಆಯುರ್ವೇದ ಮುಂತಾದವುಗಳ ರಕ್ಷಣಾತ್ಮಕವಾಗಿ ಪ್ರಕಟವಾಗುವ ಸುಂದರ ಹಾಗೂ ಸಚಿತ್ರ ಗುಜರಾತೀ ವಾರಪತ್ರಿಕೆಯಿದು.

ತಾ|| 26–12–46 ರಿಂದ ಆರಂಭವಾದ ಈ ಪತ್ರಿಕೆಯು ಇಷ್ಟು ಸ್ವಲ್ಪ ದಿನದಲ್ಲೇ ತನ್ನ ವೈಶಿಷ್ಟ್ಯದಿಂದಲೂ, ಎರಡು ವಿಶೇಷಾಂಕದಿಂದಲೂ ಇಡೀ ಗುಜರಾತಿನಲ್ಲಿ ಮಹತ್ತಾದ ಸ್ಥಾನವನ್ನು ಹೊಂದಿದೆ. ಶ್ರೀ ಲಕ್ಷ್ಮಚಂಡೀ ಮಹಾಯಜ್ಞ ಮತ್ತು ಅ. ಭಾ. ಧರ್ಮ ಸಂಘದ ಸಮ್ಮೇಳನದ ವಿಶೇಷಾಂಕವು 60 ಪುಟ 25 ಚಿತ್ರಗಳಿಂದ ವಿಶೇಷವಾದ ಖ್ಯಾತಿ ಪಡೆದಿದೆ.

ಈ ಪತ್ರಿಕೆಯಲ್ಲಿ 8 ಪುಟಗಳು ಗುಜರಾತಿ, 2 ಪುಟಗಳು ಇಂಗ್ಲೀಷು ಲೇಖನಗಳು, ಕಥೆ, ಕವಿತೆಗಳು ಇರುವುವು. ಇದು ಹಿಂದಿ ಸ್ಥಾನದಲ್ಲಿಲ್ಲಿಯೂ, ಆಫ್ರಿಕಾ ಮುಂತಾದ ಕಡೆಯಲ್ಲಿಯೂ ಬಹಳ ಸಂಖ್ಯೆಯಲ್ಲಿ ಹೋಗುತ್ತಿದೆ. ಇದರಿಂದ ಸನಾತನೀ ಜಗತ್ತಿನಲ್ಲಿ ಉತ್ತಮ ಪತ್ರಿಕಾಭಾವದ ನ್ಯೂನತೆಯು ದೂರವಾಗಿದೆ.

ವಿಳಾಸ — ನವಭಾರತೀ ಕಾರ್ಯಾಲಯ, ಗೋಂಡಲರೋಡ್, ರಾಜಕೋಟೆ (ಕಾಠಿಯಾವಾಡ)

ಧರ್ಮಕ್ಕಾಗಿ ಹೋರಾಟ ಅನಿವಾರ್ಯ !

ಲೇಖಕ- ಶಿರೋಮಣಿ ರಾಜಾ ಎಸ್. ಗುರುರಾಜಾಚಾರ್ಯ, ಅಖಿಲ ಕರ್ನಾಟಕ ಸನಾತನ ಸಂಘ (ಮುಂತ್ರಾಲಯ) ಕ್ಯಾಂಪ್ - ಬಿಗ್‌ಹೌಸ್ ನ್ಯಾಜನಗೂಡು.

ಧರ್ಮಬಾಹಿರ ಸರಕಾರವು ಭಾರತದ ಅಕಲಂಕ ಸಂಸ್ಕೃತಿಯುಸ್ಥೇ ನಿರ್ಮೂಲ ಮಾಡತೊಡಗಿದೆ. ಇಂದು ಭಾರತದ ರಾಜ್ಯಸೂತ್ರಗಳನ್ನು ಹಿಡಿದಿರುವ ತಾತ್ಕಾಲಿಕ ಸರ್ಕಾರವು ದೇಶವನ್ನು ಮುಂದೆ ತರಲಸಮರ್ಥವಾಗಿದೆ. ದೇಶದ ಜನರ ಹೊಟ್ಟೆಬಟ್ಟೆಗಳನ್ನು ಪೂರೈಸಲು ಯೋಗ್ಯತೆಯಿಲ್ಲದಾಗಿದೆ ಭಾರತದ ಶಾಂತಿಯನೇ ನಾಶಮಾಡತೊಡಗಿದೆ ಇಂದು ಭಾರತಾದ್ಯಂತವೂ ಅಣ್ಣ ತಮ್ಮಂದಿರಂತೆ ಇದ್ದ ಹಿಂದೂ ಮುಸ್ಲಿಂರಲ್ಲಿ ಭಿನ್ನಾಭಿಪ್ರಾಯವುಂಟಾಗಿ ಪ್ರಾಣಾಂತಿಕ ತಿಕ್ಕಾಟವೂ ದ್ವೇಷವೂ ಉಲ್ಬಣಿಸಿ, ನವಖಾಲಿ ಬಿಹಾರ್ ಪಂಜಾಬ್ ಬಿಂಗಳೂರುಗಳಲ್ಲಿ ನಡೆದ ಹತ್ಯಾಕಾಂಡ ರಕ್ತಪಾತಕ್ಕೆ ಧರ್ಮಹೀನ ತಾತ್ಕಾಲಿಕ ಸರಕಾರವೇ ಹೊಣೆಯೆಂದು ನಿರ್ಭಯವಾಗಿ ಹೇಳಬಹುದು. ದೇಶದ ಶಾಂತಿ ನಾಶಮಾಡಿದ ಸರಕಾರವು ಎಂದಿಗಾದರೂ ದೇಶವನ್ನು ಉನ್ನತ ಸ್ಥಿತಿಗೆ ತರಲು ಸಮರ್ಥವಾದೀತೆ ? ಈ ಸರ್ಕಾರವು ಅಧಿಕಾರ ನಿರ್ವಹಿಸಲಸಮರ್ಥವಾಗಲು ಕಾರಣವೇನು ? ಅದಕ್ಕುತ್ತರವಿಷ್ಟೆ. ಈ ಸರಕಾರವು ತನ್ನ ರಂಗವಾದ ರಾಜಕೀಯವನ್ನು ಬದಿಗಿರಿಸಿ ಧಾರ್ಮಿಕ ರಂಗದಲ್ಲಿ ಪ್ರವೇಶಿಸಿ ಪ್ರಾಚೀನ ಸಂಸ್ಕೃತಿಯ ಸಂಕೇತವಾದ ಧರ್ಮವನ್ನು ಒಹುಮುಖದಿಂದ ನಾಶಮಾಡತೊಡಗಿರುವುದರಿಂದಲೇ ಎಂದು. ಧರ್ಮದ ಗಂಧವನ್ನರಿಯದವರು ಪಾಶ್ಚಾತ್ಯ ನಾಗರೀಕತೆಯನ್ನು ಭಾರತದಲ್ಲಿ ತರಲ್ಪಟ್ಟಿಸುವವರು ಅಧರ್ಮಿಯರೂ ಆದ ಕೆಲವರು ಜನರನ್ನು ವಂಚಿಸಿ ಎಲ್ಲರ ಹಿತರಕ್ಷಣೆ ಮಾಡುವ ಭರವಸೆ ಕೊಟ್ಟು ಚುನಾಯಿತರಾಗಿ ಅಸೆಂಬ್ಲಿಗಳಲ್ಲಿ ಹಿಂದೂ ಜನರ ಧರ್ಮವನ್ನು ನಾಶಮಾಡುತ್ತಾ ಬಂದಿರುವುದೇ ಎಂದು. ಭಾರತದಲ್ಲಿ ಶಾಂತಿ ನೆಲಸಬೇಕಾದರೆ ಸರಕಾರವು ಯಾವ ಧರ್ಮನಾಶಕ್ಕೂ ಕೈಹಾಕದೇ ಈಗಾಗಿರುವ ಮಸೂದೆಗಳನ್ನು ವಾಪಸು ತೆಗೆದುಕೊಂಡು ಧರ್ಮ ರಕ್ಷಣೆ ಮಾಡಿದರೆ ಮಾತ್ರ ಸಾಧ್ಯ ಇಲ್ಲದಿದ್ದರೆ ಧರ್ಮ ರಕ್ಷಣೆಗಾಗಿ ಹೋರಾಟ ಅನಿವಾರ್ಯ !

ಭಾರತದಲ್ಲಿ ಪ್ರಖ್ಯಾತವಾದ ಸರ್ವ ಜನರ ಪ್ರೀತಿ ಗೌರವಗಳಿಗೆ ಪಾತ್ರವಾದ 'ಅಖಿಲ ಭಾರತ ಧರ್ಮ ಸಂಘ' ಮತ್ತು ಅಖಿಲ ಭಾರತ ವರ್ಣಾಶ್ರಮ ಸ್ವರಾಜ್ಯ ಸಂಘವು ಮೊನ್ನೆ ಬೊಂಬಾಯಿನಲ್ಲಿ ನಡೆದ ಲಕ್ಷ ಚಂಡೀ ಹೋಮ ಮತ್ತು ಧರ್ಮ ಸಮ್ಮೇಳನ ಕಾಲದಲ್ಲಿ ಇಂದಿನ ಕಾಂಗ್ರೆಸ್ ಸರಕಾರವು ಏಪ್ರೆಲ್ 23 ನೇ ತಾರೀಖಿನೊಳಗಾಗಿ ಸಗೋತ್ರ ಎಳವಾ ಮಿಶ್ರ ವಿವಾಹ ಕಾನೂನುಗಳನ್ನು ಮಂದಿರ ಪ್ರವೇಶ ಕಾನೂನನ್ನೂ ವಾಪಸು ತೆಗೆದುಕೊಂಡು ಗೋವಧೆಯನ್ನೂ ನಿಲ್ಲಿಸಿ ಧರ್ಮರಕ್ಷಣೆ ಮಾಡದಿದ್ದಲ್ಲಿ ಜಗದ್ವಿಖ್ಯಾತ ಪೂಜ್ಯ ಶ್ರೀ ಕರಪಾತ್ರೀ ಜಿ ಸ್ವಾಮಿ ಮಹಾರಾಜರವರ ನೇತೃತ್ವದಲ್ಲಿ ಭಾರತಾದ್ಯಂತ ಸಾಮೂಹಿಕ ಆಂದೋಳನ ಸತ್ಯಾಗ್ರಹ ಪ್ರಾರಂಭಿಸಿ ಇಂದಿನ ಸರ್ಕಾರಕ್ಕೆ ಬಹಿಷ್ಕಾರ ಹಾಕಿ ಧರ್ಮಯುದ್ಧವನ್ನು ಪ್ರಾರಂಭಿಸುತ್ತೇವೆಂದು ಕೊನೆಮೊ ಎಚ್ಚರಿಕೆ ಕೊಟ್ಟಿರುವುದು ಎಲ್ಲರೆಯರೆಲ್ಲರಿಗೂ ಸಂತೋಷವಾದ ವಿಚಾರವಾಗಿದೆ.

ಮೈಸೂರು ದೇಶದಲ್ಲಿ ಮುಂಬರುವ ಸುಧಾರಣೆಗಳಲ್ಲಿ ಸನಾತನ ಧರ್ಮರಕ್ಷಣೆ ಮಾಡಬೇಕೆಂದು ಅಖಿಲ ಕರ್ನಾಟಕ ಸಂಘದವರು (ಮುಂತ್ರಾಲಯ ಕೇಂದ್ರ) ಮೈಸೂರು ದೇಶದ ಮಾನ್ಯ ದಿವಾನರವರಿಗೆ ಮನವಿಯನ್ನು ಒಪ್ಪಿಸಿದ್ದಾರೆ. ಈಗಾಗಲೇ ನೂರಾರು ಊರುಗಳಿಂದ ಸದರಿ ಮನವಿಗೆ ಬೆಂಬಲ ಸಹಾನುಭೂತಿ ದೊರಕಿದೆ. ಒಂದು ವೇಳೆ ಮೈಸೂರಲ್ಲೂ ಧರ್ಮ ನಾಶ ಪ್ರಾರಂಭವಾದಲ್ಲಿ ಸದರಿ ಸಂಘವು ಧರ್ಮ ರಕ್ಷಣೆಗಾಗಿ ಸತ್ಯಾಗ್ರಹವನ್ನು ಪ್ರಾರಂಭಿಸಲಿದೆ. ಈ ಕಾರ್ಯದಲ್ಲಿ ಪ್ರತಿಯೊಬ್ಬ ಭಾರತೀಯನು ತ್ಯಾಗಿಯಾಗಿ ಮುಂದೆ ಬಂದು ಸಹಕರಿಸಿ ಧರ್ಮರಕ್ಷಣೆಗಾಗಿ ದುಡಿಯಬೇಕಾದುದು ಕರ್ತವ್ಯವೆಂಬುದನ್ನು ಸೂಕ್ಷ್ಮವಾಗಿ ಸೂಚಿಸುತ್ತೇವೆ.

ಧರ್ಮಕ್ಕೆ ಜಯವಾಗಲಿ

ಸನಾತನಿಗಳ ಸತ್ಯಾಗ್ರಹವೇ ?

ಸ್ವಂ. ಸು. ತಂತಿ

ಬೊಂಬಾಯಿ ಏ 9 — ಕಾಂಗ್ರೆಸ್ಸು ಹಿಂದೂ ಮತ ಮತ್ತು ಸಂಸ್ಕೃತಿಯ ಒಳವಿಚಾರಗಳಲ್ಲಿ ಒತ್ತಾಯಪೂರ್ವಕವಾದ ಶಾಸನಗಳ ಮೂಲಕ ಅಭಿಕ್ರಮಿಸಲು ಕೈಹಾಕಲುಪಕ್ರಮಿಸಿತ್ತಿರುವುದರಿಂದ ಜನರ ಮೇಲಿನ ತನ್ನ ಹಿಡಿತವನ್ನು ಕಳೆದು ಕೊಳ್ಳುತ್ತಿದೆ ಎಂಬುದೇ ಶಾಸನ ಸಭೆಯ ಮುಂದೆ ಸೋಮವಾರ ಹಿಂದುಗಳು ನಡೆಸಿದ ಕಪ್ಪು ಬಾವುಟ ಪ್ರದರ್ಶನದ ನಂತರ ನಿನ್ನೆ ಮಾದವ ಬಾಗಿನಲ್ಲಿ ಶ್ರೀ ದ್ವಾರಕಾ ಜಗದ್ಗುರುಗಳವರ ಅಧ್ಯಕ್ಷತೆಯಲ್ಲಿ ನಡೆದ ಬಹು ಭಾರಿ ಹಿಂದೂಗಳ [illegible] ನಾಯಕರುಗಳು ಮಾಡಿದ [illegible] ಖ್ಯಾಂಶವಾಗಿದೆ.

[illegible] ಗೋ [illegible] ಸಾ [illegible] ಲ್ಲಿ [illegible] ಸಂಹರಿಸುವ [illegible] ಎಂದು ತಿಳಿಸಿದರು. ಮು [illegible] ದ ಹರಿಜನ ದೇವಾಲಯ [illegible] ಸೊದೆ, ವಿವಾಹ ವಿಚ್ಛೇದ [illegible] ಯಿದೆಯನ್ನು ಖಂಡಿಸಿಯೂ ಸೋಮವಾರ ಪ್ರದರ್ಶನದಲ್ಲಿ ವೀರ ಮುಖಂಡತ್ವ ವಹಿಸಿದ್ದ ಶ್ರೀ ಗೋಸ್ವಾಮಿ ದೀಕ್ಷಿತಜೀಯರನ್ನು ಅಭಿನಂದಿಸುವ ಠರಾವು ಮಾಡಲಾಯಿತು.

ಸರಕಾರದ ಮತ್ತು ವಿರೋಧ ಶಾಸನಗಳನ್ನು ಎದುರಿಸಲು ಕ್ಷೀಪ್ರದಲ್ಲೇ ಪ್ರಾರಂಭವಾಗಲಿರುವ ಧರ್ಮ ಯುದ್ಧದ (ಮತದ ಹೋರಾಟ) ಸೈನ್ಯಕ್ಕೆ ಜನರು ಹೆಚ್ಚು ಹೆಚ್ಚಾಗಿ ಸೇರಬೇಕೆಂದು ಮನವಿ ಮಾಡಿಕೊಳ್ಳಲಾಯಿತು.

ಅಧ್ಯಕ್ಷರಾದ ಶ್ರೀ ದ್ವಾರಕಾ ಜಗದ್ಗುರುಗಳವರ ಹಿಂದೂಮತಕ್ಕೆ ಆಪತ್ತೊದರಗಿರುವ ಈ ಕಾಲದಲ್ಲಿ ಜನರು ಜಾಗೃತಿಗೊಳ್ಳಬೇಕೆಂದೂ ಆಚಾರ್ಯರು ಮುಂದೆ ಹೆಚ್ಚು ತ್ಯಾಗಕ್ಕೆ ಸಿದ್ಧರಾಗಬೇಕೆಂದೂ ತಿಳಿಸಿದರು.

ಶ್ರೀ ಜಗದ್ಗುರುಗಳವರು ಕೊಲ್ಲಾಪುರ ಮಾರ್ಗವಾಗಿ [illegible] ಸಾನಕ್ಕೆ ಈ ದಿನ ಪ್ರ [illegible] ವರ್ಧಿ

ಸನಾತನಿಗಳಿಂದ ಕಪ್ಪು ಬಾವುಟ ಪ್ರದರ್ಶನ

ಸ್ವಂ. ಸು. ತಂತಿ

ಬೊಂಬಾಯಿ ಏ 8 — ಇಲ್ಲಿಯ ಶಾಸನ ಸಭಾ ಮುಂದೆ ಬಂದಿರುವ ಹರಿಜನ ದೇವಾಲಯ ಪ್ರವೇಶ ಮಸೂದೆಯನ್ನು ಪ್ರತಿಭಟಿಸಿ ಶಾಸನ ಸಭೆ ಭವನದ ಮುಂದೆ ಸುಮಾರು ನೂರು ಮಂದಿ ಸನಾತನಿಗಳೂ ಕಪ್ಪು ಬಾವುಟ ಪ್ರದರ್ಶನ ನಡೆಸಿದರು. ಈ ಸಂದರ್ಭದಲ್ಲಿ ಗೋಸ್ವಾಮಿ ಶ್ರೀ ದೀಕ್ಷಿತಜೀಯವರು ದಸ್ತಗಿರಿಮಾಡಲ್ಪಟ್ಟು ನಂತರ ಬಿಡುಗಡೆ ಮಾಡಲ್ಪಟ್ಟರು. ಈ ದಿನ ಸಂಜೆ ಹಿಂದೂಗಳ ಸಭೆಯು ಮಾಧವಬಾಗಿನಲ್ಲಿ ಶ್ರೀ ದ್ವಾರಕಾ ಜಗದ್ಗುರುಗಳವರ ಅಧ್ಯಕ್ಷತೆಯಲ್ಲಿ ನಡೆಯುವುದು. ಮತಾಚಾರ ವಿರೋಧದ ಮಸೂದೆಗಳ ಬಗ್ಗೆ ಪ್ರತಿಭಟನೆ ಸೂಚಿಸಲಾಗುವುದು ಮತ್ತು ಪರಿಸ್ಥಿತಿಯನ್ನು ಪರ್ಯಾಲೋಚಿಸಲಾಗುವುದು. ಧರ್ಮ ಸಂಘ ಮುಂತಾದ ಸಂಸ್ಥೆ ಸರಕಾರಕ್ಕೆ ಒಂದು ಒಲವತ್ತಾದ [illegible] ಡುವುದು.

ಶ್ರೀ ಜಗದ್ಗುರುಗಳವರು ಮುಳಬಾಗಲಿಗೆ ಆಗಮನ

ಶ್ರೀ ದ್ವಾರಕಾಪೀಠದ ಶ್ರೀ ಜಗದ್ಗುರುಗಳವರು ಈ ಒಂದೂ ಕಾಲು ವರ್ಷಗಳಿಂದ ಗುಜರಾತ್, ಕಾಥಿಯಾವಾರ್ ಉತ್ತರ ಭಾರತಗಳಲ್ಲಿ ಸಂಚರಿಸುತ್ತಿರುವುದು ಸರಿಯಷ್ಟೆ ! ಶ್ರೀಗಳವರು ದ್ವಾರಕಾದಲ್ಲಿ ಪಾಲ್ಗುಣ ಬಹುಳ 2 ರಿಂದ ಷಷ್ಠೀ (ತಾ|| 9 ರಿಂದ 13 ಮಾರ್ಚಿ) ವರೆಗೆ ಶಂಕ್ರಮಠದಲ್ಲಿ ಶ್ರೀ ವಿಷ್ಣು ಮಹಾಯಾಗ – ಸನಾತನ ಧರ್ಮ ಸಮ್ಮೇಳನ ಧಾರ್ಮಿಕ ಸಾಹಿತ್ಯ ಪ್ರದರ್ಶನಮುಂತಾದ್ದನ್ನು ಮುಗಿಸಿಕೊಂಡು 4 ನೇ ವಾರದಲ್ಲಿ ದ್ವಾರಕೆಯಿಂದ ಜಾಮ್ ನಗರ ಮಾರ್ಗವಾಗಿ ಬೊಂಬಾಯಿಗೆ ವಿಮಾನದಲ್ಲಿ ಬಂದು ಅಲ್ಲಿಂದ ಮೋಟಾರಿನಲ್ಲಿ ಪುನಾ ಕೊಲ್ಲಾಪುರ ಹುಬ್ಬಳ್ಳಿ ಹರಿಹರ ಮಾರ್ಗವಾಗಿ ಮೋಟಾರಿನಲ್ಲಿ ಮೊನ್ನೆ ಮುಳಬಾಗಲಿಗೆ ದಯಮಾಡಿಸಿದರು.